ಶ್ರೀ ಸಿದ್ದರಾಮಯ್ಯ: ನಾಳೆ ಬೇಡ. ಇವತ್ತೇ ಪ್ರಶ್ನೋತ್ತರ ಆದಮೇಲೆ ಅವಕಾಶ ಕೊಡಿ. ನಾಳೆ ಕೊಟ್ಟರೆ ಇದರ importance ಹೋಗಿಬಿಡುತ್ತದೆ.

ಅಧ್ಯಕ್ಷರು: ಹಾಗೇ ಆಗಲಿ. ಪ್ರಶ್ನೋತ್ತರ ಆದ ನಂತರ ನಿಯಮ 69ರ ಅಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡೋಣ. ಈಗ ಪ್ರಶ್ನೋತ್ತರ.

4. ಪ್ರಶ್ನೋತ್ತರ :

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :

ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಗೆ ಏಕರೂಪದ ಸೌಲಭ್ಯ

149(965) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರುಗಳಿಗೆ ಸರ್ಕಾರವು ಪ್ರಸ್ತುತ ಒದಗಿಸಿಕೊಡುತ್ತಿರುವ ವಿವಿಧ ಸೌಲಭ್ಯಗಳಾವುವು ;

ಆ) ನೇಕಾರರಿಗೆ ಒದಗಿಸಿಕೊಡುವ ಸೌಲಭ್ಯಗಳಲ್ಲಿ ಸಮಾನತೆ ಇರದಿರಲು ಕಾರಣಗಳೇನು ;

ಇ) ಎರಡೂ ವಲಯಗಳಲ್ಲಿ ಬಡ ನೇಕಾರರು ಶ್ರಮಿಸುತ್ತಿರುವ ಕಾರಣ ಸರ್ಕಾರದ ಸೌಲಭ್ಯಗಳನ್ನು ಏಕರೂಪದಲ್ಲಿ ಒದಗಿಸಿಕೊಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರುಗಳಿಗೆ ಸರ್ಕಾರವು ಪ್ರಸ್ತುತ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸುತ್ತಿದೆ.

1) ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ

2) ವಸತಿ ಕಾರ್ಯಾಗಾರ

3) ಆರೋಗ್ಯ ವಿಮೆ

4) ಸಾಮಾಜಿಕ ಭದ್ರತೆ

5) ಮೂಲಭೂತ ಸೌಕರ್ಯಗಳು

6) ತರಬೇತಿ ಮಗ್ಗ / ಸಲಕರಣೆ ಪೂರೈಕೆ

7) ಬಂಡವಾಳ ಹೂಡಿಕೆ ಸಹಾಯಧನ

8) ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ

9) ಅಧ್ಯಯನ ಪ್ರವಾಸ.

ಆ) ಕೈಮಗ್ಗ ಹಾಗೂ ವಿದ್ಯುತ್ ಮಗ್ಗ ನೇಕಾರರ ಅವಶ್ಯಕತೆಗಳು ಬೇರೆ ಬೇರೆಯಾಗಿದ್ದು, ಅವಶ್ಯಕತೆಗೆ ತಕ್ಕಂತೆ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಎರಡೂ ವಲಯಗಳ ನೇಕಾರರ ಅವಶ್ಯಕತೆ ಬೇರೆ ಬೇರೆ ಇರುವುದರಿಂದ ಕೆಲವು ಯೋಜನೆಗಳಡಿ ಮಾತ್ರ ಏಕರೂಪದ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿದೆ.

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ನಮ್ಮ ಕರ್ನಾಟಕದಲ್ಲಿ ನೇಕಾರರ ಬಗ್ಗೆ ನಿಜ ಹೇಳಬೇಕಾದರೆ ಇದೊಂದು ದೊಡ್ಡ ಸಮಾಜ. ಅವರೂ ಬಹಳ ವರ್ಷಗಳಿಂದ ಈ ವೀವಿಂಗ್ ಪ್ರೊಫೆಷನ್‌ನ್ನು ಮಾಡಿಕೊಂಡು ಬಂದಿದ್ದಾರೆ. ರಾಜ್ಯ ಸರ್ಕಾರ ಈಗಾಗಲೇ ಅವರಿಗೆ ಸುಮಾರು ಸ್ಕೀಮ್ಸ್‌ನ್ನು ಕೊಟ್ಟಿದ್ದಾರೆ. ಅದರಲ್ಲಿ ವಿಶೇಷವಾಗಿ investment, power subsidy ಎಂದು ಕೊಡುತ್ತಿದ್ದೀರಿ. Financial investment subsidy ಏನಾಗಿದೆಯೆಂದರೆ 3% ಬಡ್ಡಿ ದರದಲ್ಲಿ ಸಾಲವನ್ನು ಕೊಡುತ್ತಿದ್ದಿರಿ, ಅದನ್ನು ಈಗ ನಿಲ್ಲಿಸಿಬಿಟ್ಟಿದ್ದಾರೆ. Power subsidy ಎಷ್ಟು ಕೊಡುತ್ತಿದ್ದೀರಿ ಎಂಬುದು ನಮಗೆ ಗೊತ್ತಿಲ್ಲ. ಅದನ್ನು ನಿಜವಾಗಿಯೂ ಕೊಡುತ್ತಿದ್ದೀರೋ ಇಲ್ಲವೋ ಎಂಬ ಸಂಶಯವೂ ಬಂದಿದೆ. ನಮ್ಮ ರಾಜ್ಯದ handloom and power loom ನೇಕಾರರು ಬಹಳ ಕಷ್ಟದಲ್ಲಿದ್ದಾರೆ. ಸರ್ಕಾರದವರು ಸುಮಾರು 10 ಲಕ್ಷ ಸೀರೆಗಳನ್ನು ಕೊಂಡುಕೊಂಡಿದ್ದೀರಿ. ಆದರೆ ನಮ್ಮ ರಾಜ್ಯದ handloom and power loom ನಿಂದ ಒಂದು ಸೀರೆಯನ್ನೂ ಕೊಂಡುಕೊಳ್ಳಲಿಲ್ಲ. ಕೊನೆಯ ಪಕ್ಷ ಆ ಸೀರೆಯನ್ನಾದರೂ ನಮ್ಮ ರಾಜ್ಯದಿಂದ ಕೊಂಡುಕೊಂಡಿದ್ದರೆ ನೇಕಾರರಿಗೆ ಅನುಕೂಲವಾದರೂ ಆಗುತ್ತಿತ್ತು. ಇವತ್ತು ಹಲವಾರು ನೇಕಾರರು ಸಮಸ್ಯೆಯಿಂದ ಆತ್ಮಹತ್ಯೆ

ಮಾಡಿಕೊಳ್ಳುತ್ತಿದ್ದಾರೆ. ರೈತರಿಗೆ ಈ ಸಲ ಒಂದು ವಿಶೇಷ ಬಜೆಟ್‌ನ್ನು ಮಾಡಿದ್ದೀರಿ. ಅದೇ ರೀತಿ ರಾಜ್ಯದಲ್ಲಿ ಹೆಚ್ಚಿನ ಜನ ಸಂಖ್ಯೆಯಲ್ಲಿರುವ ನೇಕಾರರು ಸಮಾಜದವರಿಗೂ ಬಜೆಟ್‌ನಲ್ಲಿ ಪ್ರಾವಿಜನ್ ಕೊಟ್ಟು ಮಾಡಬೇಕಾಗಿತ್ತು. ಅವರನ್ನು ಸಾಯಲಿ ಎಂದು ಬಿಟ್ಟರೆ ತಪ್ಪಾಗುತ್ತದೆ. ತಾವು ಸಬ್ಸಿಡಿಯನ್ನೇನು ಕೊಡುತ್ತಿದ್ದೀರಿ, ಸೀರೆಗಳನ್ನೇನು ತೆಗೆದುಕೊಂಡಿದ್ದೀರಿ ಇದರ ಬಗ್ಗೆ ಹೇಳಿದರೆ ಒಳ್ಳೆಯದು.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ತಾವು ನೇಕಾರರಿಗೆ ಹಲವಾರು ರಿಯಾಯಿತಿಗಳನ್ನು ಕೊಟ್ಟಿರುವ ಬಗ್ಗೆ ಉತ್ತರದಲ್ಲಿ ಹೇಳಿದ್ದೀರಿ. ಅದರಲ್ಲಿ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ ಎಂದು ಒಂದು ಇದೆ. ಮಾನ್ಯ ಸುರೇಶ್‌ಕುಮಾರ್‌ರವರು ಮತ್ತು ಗೋವಿಂದಕಾರಜೋಳರವರಲ್ಲಿ ವಿನಂತಿ ಮಾಡುವುದೇನೆಂದರೆ, ಬೆಂಗಳೂರಿನಲ್ಲಿ ಕೈಮಗ್ಗ ಮತ್ತು ವಿದ್ಯುತ್ ಮಗ್ಗದವರಿಗೆ water supply ಗೆ ಕಮರ್ಷಿಯಲ್ ದರವನ್ನು ಹಾಕುತ್ತಿದ್ದಾರೆ. ಅದಕ್ಕೂ ರಿಯಾಯಿತಿ ಕೊಟ್ಟರೆ ಬದುಕುತ್ತಾರೆ. ಈಗ ನೀರಿಗೆ ಕಮರ್ಷಿಯಲ್ ದರವನ್ನು ಹಾಕುತ್ತಿದ್ದಾರೆ. ಆದ್ದರಿಂದ ನೀರಿನ ಸರಬರಾಜಿಗೆ Domestic ದರವನ್ನು ಹಾಕುವಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಶ್ರೀ ಆರ್. ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, 3% ಬಡ್ಡಿ ದರದಲ್ಲಿ ಸಾಲ ಕೊಡುವುದು ಇವರಿಗೂ extend ಆಗಿತ್ತು. ಆದರೆ, ಆ ಪ್ರಮಾಣದಲ್ಲಿ ನಮಗೆ ಸಾಲ ದೊರೆಯುತ್ತಿಲ್ಲವೆಂದು ಅವರು ನಮಗೆ ಮನವಿಯನ್ನೂ ಕೊಟ್ಟಿದ್ದಾರೆ. ಆದ್ದರಿಂದ ನಿಮ್ಮ ಸೊಸೈಟಿಗಳು ಇರಬಹುದು, ಬ್ಯಾಂಕುಗಳು ಇರಬಹುದು ಅವರಿಗೆ 3% ಬಡ್ಡಿಯ ದರದಲ್ಲಿ ಸಾಲ ಕೊಡುವಂತೆ ನಿರ್ದೇಶನವನ್ನು ನೀಡಬೇಕಾಗುತ್ತದೆ. ಅದರಲ್ಲಿ ತುಂಬಾ ಲೋಪದೋಷಗಳಿದೆಯೆಂದು ಹೇಳುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ವಿಶೇಷವಾಗಿ ಏನು ಸಮಸ್ಯೆಯಾಗಿದೆಯೆಂದರೆ ಎಲ್ಲೆಲ್ಲಿ ವಿದ್ಯುತ್ ಮಗ್ಗಗಳನ್ನು ನಡೆಸುತ್ತಿದ್ದಾರೆ ಆ ಬಡಾವಣೆಯಲ್ಲಿ ಅಕ್ಕಪಕ್ಕದವರ ಸಮಸ್ಯೆ ಇದೆ. ಅವರಿಗೆ timing problem ಆಗಿರುವುದರಿಂದ ಶಬ್ಧ ಮಾಲಿನ್ಯವಾಗುತ್ತದೆಂದು

ಅಕ್ಕಪಕ್ಕದ ಎಲ್ಲರೂ ಅವರಿಗೆ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ತಾವು ಬಿಬಿಎಂಪಿ ಅಧಿಕಾರಿಗಳೊಂದಿಗೆ ಮಾತನಾಡಿ ಇಂಥ ಸಮಯದಲ್ಲಿ ಅಂದರೆ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 7 ಗಂಟೆಯವರೆಗೆ ಮಗ್ಗಗಳನ್ನು ನಡೆಸಬಹುದು ಎಂದು ಸಮಯವನ್ನು ನಿಗದಿಮಾಡಿ ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಈಗ ಅವರುಗಳಿಗೆ ಬಹಳಷ್ಟು ಕಿರುಕುಳ, ಹಿಂಸೆಯಾಗುತ್ತಿದೆ. ತಾವು ಆ ಸಂಬಂಧ ಸಮಯವನ್ನು ನಿಗದಿ ಮಾಡಿದರೆ ಅದನ್ನು ತಡೆಗಟ್ಟಲು ಅನುಕೂಲವಾಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ, ಅಧ್ಯಕ್ಷರೆ, ಎರಡು ವಿಷಯಗಳ ಬಗ್ಗೆ ನಾನು ಮಾನ್ಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ. ಇದರಲ್ಲಿ ನೀವು health insurance ಎಂದು ಹೇಳಿದ್ದೀರಿ. ಐಸಿಐಸಿಐ ಬ್ಯಾಂಕ್‌ನ ಒಂದು ವಿಮಾ ಯೋಜನೆ ಇದೆ. ಅದರಲ್ಲಿ ಬಹಳಷ್ಟು waiting list ಇದೆ. ನನ್ನ ಮತಕ್ಷೇತ್ರದಲ್ಲಿ ಹೋದ ಸಲ ಇದರಲ್ಲಿ ಕೆಲವರಿಗೆ ತೊಂದರೆಯಾದಾಗ ಅವರನ್ನು ಕೇಳಿದರೆ the list is running in hundreds. ಅವರು attend ಮಾಡುತ್ತಿಲ್ಲ. ಅವರಿಗೆ ಸಮರ್ಪಕವಾಗಿ insurance ನ್ನು ಕೊಡುತ್ತಿಲ್ಲ. ಯಾರು ವಿಮೆಯ ಹಣವನ್ನು ಕಟ್ಟಿದ್ದಾರೆ, ಅವರಿಗೆ ಈ ಕೂಡಲೇ ಇದನ್ನು ಸರಿಪಡಿಸಬೇಕು. ಮಾನ್ಯ ಮುಖ್ಯಮಂತ್ರಿಯವರು ಸೀರೆ ಹಂಚುವ ನಿಮ್ಮ ಕಾರ್ಯಕ್ರಮವೇನಿದೆ, ನೀವು ಆ ಸೀರೆಗಳನ್ನು ನಮ್ಮ ನೇಕಾರರಿಂದ ಕೊಂಡುಕೊಂಡಿದ್ದರೆ ಬಹಳ ಒಳ್ಳೆಯದಾಗುತ್ತಿತ್ತು. ನಮ್ಮ ನೇಕಾರರಿಗೂ ಒಳ್ಳೆಯದಾಗುತ್ತಿತ್ತು, ಒಳ್ಳೆಯ ಕ್ವಾಲಿಟಿಯ ಸೀರೆಯೂ ಸಿಗುತ್ತಿತ್ತು. ನಮ್ಮ ಜನರಿಗೂ ಅನುಕೂಲವಾಗುತ್ತಿತ್ತು. ಮುಂದೆ ಏನಾದರೂ ಸೀರೆ ಕೊಂಡುಕೊಳ್ಳುವ ಕಾರ್ಯಕ್ರಮ ಇದ್ದರೆ ನಮ್ಮ ನೇಕಾರರಿಂದಲೇ ತೆಗೆದುಕೊಳ್ಳುತ್ತೇವೆಂದಾದರೂ ಭರವಸೆಯನ್ನು ಕೊಡಿ.

ಶ್ರೀ ಸಿದ್ದುಸವದಿ: ಮಾನ್ಯ ಅಧ್ಯಕ್ಷರೆ, 2010-11, 2011-12ನೇ ಸಾಲಿನಲ್ಲಿ 3% ಬಡ್ಡಿ ದರದಲ್ಲಿ ಸಾಲ ಕೊಡುವ ಸರ್ಕಾರದ ಆದೇಶ ಆದಷ್ಟು ಬೇಗ ಹೊರಡಿಸಬೇಕು. ಏಕೆಂದರೆ ಈಗಾಗಲೇ ಬ್ಯಾಂಕ್‌ನವರು ನೇಕಾರರಿಗೆ 14% ಬಡ್ಡಿಯನ್ನು ತುಂಬಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ದಯಮಾಡಿ

ಆ ಬಗ್ಗೆ ಇವತ್ತೇ ಆದೇಶ ಮಾಡಬೇಕು ಇನ್ನು ಎರಡನೆಯದಾಗಿ ಈಗಾಗಲೇ ಹೇಳಿದ ಪ್ರಕಾರ ಭಾಗ್ಯಲಕ್ಷ್ಮಿ ಸ್ಕೀಂ ಏನಿದೆ, ಆ ಯೋಜನೆಗೆ ಬೇಕಾದ ಸೀರೆಗಳನ್ನು ನೇಕಾರರಿಂದಲೇ ಖರೀದಿ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಏಕೆಂದರೆ ಒಂದು ಲಕ್ಷಕ್ಕೂ ಮೇಲ್ಪಟ್ಟು ನೇಕಾರರು ನೇಕಾರಿಕೆಯಲ್ಲೇ ಅವಲಂಬಿತರಾಗಿರುವುದರಿಂದ ಭಾಗ್ಯಲಕ್ಷ್ಮಿ ಯೋಜನೆಗೆ ಬೇಕಾದ ಸೀರೆಗಳನ್ನು ನಮ್ಮ ನೇಕಾರರಿಂದಲೇ ಖರೀದಿ ಮಾಡಬೇಕು. ಇನ್ನು ಮೂರನೆಯದಾಗಿ,. .

ಅಧ್ಯಕ್ಷರು: ಸಿದ್ದು ಸವದಿಯವರೆ, ಮೊದಲು ಮಂತ್ರಿಗಳು ಉತ್ತರ ಹೇಳಲಿ ಬಿಡಿ. ಇದು ಪ್ರಶ್ನೋತ್ತರ. ಮಾನ್ಯ ಸದಸ್ಯರ ಪ್ರಶ್ನೆಯಲ್ಲಿಯೇ ಏನು ಬೇಡಿಕೆ ಇಟ್ಟಿದ್ದಾರೆ ಅದನ್ನೇ ಮತ್ತೆ ನೀವು ಕೇಳಬೇಡಿ. ತಾವು ಈಗ ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷದಲ್ಲಿ ಹೇಳಿಬಿಡುತ್ತೇನೆ. ಎಲ್ಲರ ಉಪ ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಒಟ್ಟಿಗೆ ಉತ್ತರ ಹೇಳಿಬಿಡಲಿ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಬಂದಮೇಲೆ ನಮ್ಮ ಸರ್ಕಾರ ನೇಕಾರರಿಗೆ ಸಾಕಷ್ಟು ಸವಲತ್ತುಗಳನ್ನು ಕೊಟ್ಟಿರತಕ್ಕಂಥ ಹಲವಾರು ಉದಾಹರಣೆಗಳಿವೆ. ಸಾಕಷ್ಟು ಬಡ್ಡಿ ರಿಯಾಯಿತಿ, ಸಾಲ ಮನ್ನಾ, ವಿದ್ಯುತ್ ರಿಯಾಯಿತಿ, ಇಷ್ಟೆಲ್ಲಾ ಸೌಲಭ್ಯಗಳನ್ನು ಕೊಟ್ಟಿದ್ದರೂ ಕೂಡ ಬಡ ನೇಕಾರರಾಗಿರತಕ್ಕಂಥ ಕೆ.ಹೆಚ್.ಡಿ.ಸಿ.ಯಲ್ಲಿ ಬರತಕ್ಕಂಥ ನೇಕಾರರಿಗೆ ಯಾವುದೇ ರೀತಿ ಮನ್ನಾ ಕೊಟ್ಟಿಲ್ಲ. ನೇಕಾರರ ಬೇಡಿಕೆಯಾಗಿರತಕ್ಕಂಥ ಡಚ್ ಮತ್ತು ಹೆಚ್‌ಡಿಎಫ್‌ಸಿ ಯಿಂದ ಹದಿನೈದು ವರ್ಷಗಳ ಹಿಂದೆ ಅವರೇನು ಸಾಲವನ್ನು ಪಡೆದಿದ್ದಾರೆ ಆ ಸಾಲವನ್ನೂ ಕೂಡ ಸರ್ಕಾರ ಮನ್ನಾ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ದೊಡ್ಡನಗೌಡ ಜಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹಲವಾರು ಸವಲತ್ತುಗಳನ್ನು ನೇಕಾರರಿಗೆ ಕೊಟ್ಟಿರತಕ್ಕಂಥ ಸಂದರ್ಭದಲ್ಲಿ 3 ಪರ್ಸೆಂಟ್ ಬಡ್ಡಿದರದಲ್ಲಿ ಸಾಲವನ್ನು

ಏನು ವಿತರಣೆಯನ್ನು ಮಾಡುತ್ತಿದ್ದೇವೆ, ಈ ಕೆಲಸ ಸಹಕಾರಿ ಇಲಾಖೆ ಮೂಲಕ ಆಗುತ್ತಿರುವುದರಿಂದ ನೇಕಾರರಿಗೆ ಈ ಸಾಲ ನೇರವಾಗಿ ತಲುಪುತ್ತಿಲ್ಲ. ಆದುದರಿಂದ ಇದು ನೇರವಾಗಿ ಜವಳಿ ಇಲಾಖೆಯಿಂದ ತಲುಪಿಸುವಂಥ ವ್ಯವಸ್ಥೆ ಆಗಬೇಕೆನ್ನುವ ವಿನಂತಿಯನ್ನು ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಹ್ಯಾರಿಸ್‌ರವರು ತಮ್ಮ ಉಪ ಪ್ರಶ್ನೆಯಲ್ಲಿ ನೇಕಾರರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆಯನ್ನು ಮಾಡುತ್ತೀರೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ಅನುಮಾನವಿದೆ ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತ ಮಾಡಿದರು. ನಾವು ಪ್ರತಿ ವರ್ಷ ನೇಕಾರರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ ಮಾಡುವುದಕ್ಕಾಗಿ 65 ಕೋಟಿ ರೂ.ಗಳನ್ನು ಸರ್ಕಾರದಿಂದ ನಾವು ತುಂಬುತ್ತಿದ್ದೇವೆ. ಅವರಿಗೆ ರಿಯಾಯಿತಿ ದರದಲ್ಲಿ ಒಂದು ರೂಪಾಯಿ ಇಪ್ಪತ್ತೈದು ಪೈಸೆಯಂತೆ 20 ಹೆಚ್‌ಪಿ ವರೆವಿಗೆ ಮಾತ್ರ ವಿದ್ಯುತ್ ಪೂರೈಕೆಯನ್ನು ಮಾಡುತ್ತೇವೆ. ಆದರೆ ಅದಕ್ಕಿಂತ ಹೆಚ್ಚು ಹೆಚ್‌ಪಿ ಇರತಕ್ಕಂಥವರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ ಮಾಡುವುದಕ್ಕೆ ಸಾಧ್ಯವಿಲ್ಲ. 20 ಹೆಚ್.ಪಿ.ವರೆಗೆ ಮಾಡುವುದಕ್ಕೆ ಇರತಕ್ಕಂಥದ್ದರಲ್ಲಿಯೇ ಈ ರಾಜ್ಯದಲ್ಲಿ ಎಲ್ಲ ನೇಕಾರರಿಗೂ ಕೂಡ ಲಾಭವಾಗಿದೆ. ಇದಕ್ಕಾಗಿ ನಾವು ಸರ್ಕಾರದಿಂದ 65 ಕೋಟಿ ರೂ.ಗಳನ್ನು ತುಂಬಲಾಗುತ್ತಿದೆ. ಇದು ತಮ್ಮ ಗಮನದಲ್ಲಿರಲಿ. ಇನ್ನು ಎರಡನೆಯದಾಗಿ, ವಾಟರ್ ಸಪ್ಲೈ ಬಗ್ಗೆ ಕೇಳಿದ್ದಾರೆ. ಇದರ ಬಗ್ಗೆ ನಾನು ಮಾನ್ಯ ಸುರೇಶ್‌ಕುಮಾರ್‌ರವರಲ್ಲಿ ವಿನಂತಿ ಮಾಡುತ್ತೇನೆ. ಅದರ ಬಗ್ಗೆ ಅವರು ಪರಿಶೀಲನೆಯನ್ನು ಮಾಡಲಿ. ಏಕೆಂದರೆ, ಇವತ್ತು ಈ ಪ್ರಶ್ನೆ ಏನು ಈಗ ಕೇಳಿದ್ದಾರೆ, ಅದಕ್ಕೆ ನನ್ನ ಹತ್ತಿರ ಸದ್ಯ ಮಾಹಿತಿ ಇಲ್ಲ. ಮತ್ತು ಈ ಪ್ರಶ್ನೆ ಬೇರೆ ಇಲಾಖೆಯದ್ದೇ ಇರುವುದರಿಂದ ಅದರ ಬಗ್ಗೆ ಕೂಡ ನೇಕಾರರ ಪರವಾಗಿ ಪರಿಶೀಲನೆ ಮಾಡಬೇಕೆಂದು ಮಾನ್ಯ ಸುರೇಶ್‌ಕುಮಾರ್‌ರವರಲ್ಲಿ ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ನೇಕಾರರಿಗೆ ಕಿರುಕುಳ ವಾಗುತ್ತಿದೆ ಎನ್ನತಕ್ಕಂಥದ್ದನ್ನು

ಪ್ರಸ್ತಾಪ ಮಾಡಿದ್ದೀರಿ. ನೇಕಾರರಿಗೆ ಕಿರುಕುಳ ಆಗದ ರೀತಿಯಲ್ಲಿ ಸರ್ಕಾರ ಜವಾಬ್ದಾರಿ ತೆಗೆದುಕೊಂಡು ಏನೇನು ಸಹಾಯ, ಸವಲತ್ತುಗಳನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಮತ್ತು ಅವರನ್ನು ರಕ್ಷಣೆ ಮಾಡುವುದಕ್ಕೆ ಏನು ಸಾಧ್ಯವಿದೆಯೋ ಅದನ್ನು ಖಂಡಿತವಾಗಿಯೂ ಮಾಡುವುದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇನ್ನು ಸೀರೆ ಖರೀದಿ ಬಗ್ಗೆ ತಾವು ಮಾತನಾಡಿದಿರಿ. ಈ ಸೀರೆಗಳನ್ನು ಖರೀದಿ ಮಾಡಿರತಕ್ಕಂಥದ್ದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಈ ಸೀರೆಗಳನ್ನು ಕೊಟ್ಟಿರತಕ್ಕಂಥದ್ದು. ಅದರಲ್ಲಿ ನಮಗೆ ಬೇಕಾದಂಥ ಲಕ್ಷಾಂತರ ಸೀರೆಗಳನ್ನು ಏಕಕಾಲದಲ್ಲಿ ನಮಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈಗ ಆರ್ಡರ್ ಕೊಟ್ಟರೆ ಅವರು ತಯಾರು ಮಾಡುತ್ತಾರೆ.

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ಮೊದಲು ಮಂತ್ರಿಗಳು ಉತ್ತರ ಕೊಡಲಿ.

(ಗೊಂದಲ)

ಅಧ್ಯಕ್ಷರು: ಮೊದಲು ಮಂತ್ರಿಗಳು ಉತ್ತರ ಹೇಳಲಿ. ಅವರು ಉತ್ತರ ಹೇಳುವುದಕ್ಕೆ ಮೊದಲು ಅವಕಾಶ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ: ನೋಡಿ ಮೊದಲು ನಾನು ಪೂರ್ಣ ಹೇಳುವುದಕ್ಕೆ ನನಗೆ ಅವಕಾಶ ಕೊಡಿ. ನಾನು ನೇಕಾರರ ಪ್ರತಿನಿಧಿ. ಇದು ನಿಮಗೆ ಗೊತ್ತಿರಲಿ. ಅದೇ ಜಿಲ್ಲೆಯಲ್ಲಿ ಹುಟ್ಟಿ ಬಂದವನು. ನೇಕಾರ ಜನರು ನನ್ನ ಸುತ್ತಮುತ್ತ ಇರುತ್ತಾರೆ. ಆದುದರಿಂದ ನಾನು ಹೇಳುವುದನ್ನು ನೀವು ಮೊದಲು ಪೂರ್ತಿ ಕೇಳಿ. ನಾನು ಹೇಳುವ ಉತ್ತರವನ್ನು ಮೊದಲು ನೀವು ಗಮನವಿಟ್ಟು ಕೇಳಿ. ನೀವು ನೇಕಾರರ ಬಗ್ಗೆ ಕೇವಲ ಮಾತನಾಡಿದ್ದೀರಷ್ಟೆ. ಆದರೆ ನೀವು ನೇಕಾರರಿಗೆ ಏನು ಮಾಡಿರಲಿಲ್ಲ. ಆದರೆ ಮಾನ್ಯ ಯಡಿಯೂರಪ್ಪನವರ ಸರ್ಕಾರ ಬಂದಮೇಲೆಯೇ ನೇಕಾರರಿಗೆ ಸಹಾಯವಾಗಿರುವುದು. ಇದು ನಿಮಗೆ ಗೊತ್ತಿರಲಿ.

(ಗೊಂದಲ)

ಅಧ್ಯಕ್ಷರು: ಮೊದಲು ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಅದನ್ನು ಬಿಟ್ಟು ನೀವು ಹೀಗೆ ಒಟ್ಟಿಗೆ ಎದ್ದು ನಿಂತು ಮಾತನಾಡಿದರೆ ನಾನು ಈ ಪ್ರಶ್ನೆಯನ್ನು ಇಲ್ಲಿಗೇ ಮುಕ್ತಾಯ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಇದು ಸದನದ ನಿಯಮಾವಳಿ ಪ್ರಕಾರ ನಡೆಯಲಿ. ನನ್ನ ಉತ್ತರವನ್ನು ಕೇಳಿದ ಮೇಲೆ ಮಾನ್ಯ ಸದಸ್ಯರಾದ ನೀವು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ. ನೇಕಾರರ ಬಗ್ಗೆ ಬೇಕಾದರೆ ಈ ಸದನ ಎಷ್ಟು ದಿವಸಗಳ ಕಾಲ ನಡೆಯುತ್ತದೆಯೋ ಅಷ್ಟೂ ದಿವಸಗಳ ಕಾಲ ಚರ್ಚೆ ಮಾಡುವುದಕ್ಕೆ ಈ ಸರ್ಕಾರ ಸಿದ್ಧವಿದೆ. ಅದರ ಬಗ್ಗೆ ಎರಡನೇ ಮಾತೇ ಇಲ್ಲ. ನೇಕಾರರ ಬಗ್ಗೆ ಅಪಾರವಾದಂಥ ಕಳಕಳಿ, ಕಾಳಜಿ ನನಗೂ ಇದೆ. ಇದು ನಿಮಗೆ ಗೊತ್ತಿರಲಿ. ನೇಕಾರರು ಎಂದರೆ ಈ ದೇಶದಲ್ಲಿ, ಅದರಲ್ಲಿಯೂ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಹರಿಜನ-ಗಿರಿಜನರಿಗಿಂತಲೂ ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ಇದು ನಿಮಗೆ ಗೊತ್ತಿಲ್ಲ.

ಶ್ರೀ ಕೆ.ಜೆ. ಜಾರ್ಜ್: ನಮಗೂ ಗೊತ್ತಿದೆ.

ಅಧ್ಯಕ್ಷರು: ಜಾರ್ಜ್‌ರವರೆ, ಮಂತ್ರಿಗಳು ಉತ್ತರ ಹೇಳಲಿ. ನೀವು ಹೀಗೆ ಮಧ್ಯೆ ಎದ್ದು ನಿಂತು ಮಾತನಾಡಿದರೆ ಅದು ದಾಖಲೆಗೆ ಹೋಗಬಾರದು ಎಂದು ಹೇಳುತ್ತೇನೆ. ನೀವು ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದರೆ ದಾಖಲೆಗೆ ತೆಗೆದುಕೊಳ್ಳುವುದಿಲ್ಲ. ಜಾರ್ಜ್‌ರವರ ಮಾತುಗಳನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ: ಪದೇ ಪದೇ ಕನ್ನಡ ಕನ್ನಡ ಎಂದು ಹೇಳುತ್ತೀರಿ. ನೀವು ನೋಡಿ ಸರ್ಕಾರದ ಪಾಲಿಸಿ ಹೇಗಿದೆಯೆಂದರೆ, ಒಂದು ಕೋಟಿ ರೂ.ಗಳ ಕಾಮಗಾರಿ ಕೂಡ ಕರ್ನಾಟಕದ ಕನ್ನಡಿಗ ಕಂಟ್ರಾಕ್ಟರ್‌ಗೆ ಕಾಂಟ್ರಾಕ್ಟ್ ಸಿಗುತ್ತಿಲ್ಲ. ಕೇವಲ ಹೊರಗಡೆಯವರಿಗೇ ಈಗಿರುವ ನಿಯಮ ಗಳಿಂದ ಬೆನಿಫಿಟ್ ಆಗುವಂತಿದೆ.

(ಗೊಂದಲ)

ಅಧ್ಯಕ್ಷರು: ಖಮರುಲ್ ಇಸ್ಲಾಂರವರೆ, ನೀವು ಈ ರೀತಿ ಮಧ್ಯೆ ಮಾತನಾಡಿ ಚರ್ಚೆಗೆ ಅಡ್ಡಪಡಿಸುವುದು ಸರಿಯಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ್: ಖಮರುಲ್ ಇಸ್ಲಾಂರವರೆ, ನೀವು ಮಂತ್ರಿಯಾಗಿ ಕೆಲಸವನ್ನು ಮಾಡಿದವರು. ಸದನದ ನಿಯಮಾವಳಿಗಳನ್ನು ತಿಳಿದುಕೊಂಡಿರುವವರು.

(ಗೊಂದಲ)

ಅಧ್ಯಕ್ಷರು: ಖಮರುಲ್‌ರವರೆ, It will not go on record.

(ಗೊಂದಲ)

ಶ್ರೀ ಖಮರುಲ್ ಇಸ್ಲಾಂ: ಪರ್ಚೇಸ್ ಇಲ್ಲಿಂದ, , ,

ಅಧ್ಯಕ್ಷರು: No, No. It will not go on record.

ಶ್ರೀ ಸಿದ್ದು ಸವದಿ: ಅಲ್ಲಾರಿ. ಸೆಂಟ್ರಲ್ ಗೌರ್ನಮೆಂಟ್ ರೈತರಿಗೆ ಸಾಲ ಏನು ಕೊಟ್ಟಿದೆ, ಆ ಸಾಲವನ್ನು ಮನ್ನಾ ಮಾಡಿ ಎಂದು ನೀವು ಕೇಂದ್ರ ಸರ್ಕಾರದವರಿಗೆ ಹೇಳಿ.

ಅಧ್ಯಕ್ಷರು: ಸಿದ್ದು ಸವದಿಯವರೆ, ನೀವು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳೆ, ನೀವು ಉತ್ತರ ಕೊಡಿ.

ಶ್ರೀ ಗೋವಿಂದ ಎಂ. ಕಾರಜೋಳ್: ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ್: ದಯವಿಟ್ಟು ಎರಡೂ ಕಡೆಯವರೂ ಸ್ವಲ್ಪ ಸಮಾಧಾನದಿಂದ ಕೇಳಿ. ದಯಮಾಡಿ ಸಮಾಧಾನದಿಂದ ಎಲ್ಲರೂ ಕುಳಿತುಕೊಳ್ಳಿ. ಸೀರೆ ಖರೀದಿಯನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಭಾಗ್ಯಲಕ್ಷ್ಮಿ ಯೋಜನೆಯಲ್ಲಿ ಮಾಡಿರುವುದು.

ಶ್ರೀ ಕೆ.ಜೆ. ಜಾರ್ಜ್: ಅದು ನಮಗೆ ಗೊತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ್: ಒಂದು ನಿಮಿಷ. ನೀವು ದಯವಿಟ್ಟು ಕೇಳಿದರೆ ಹೇಳುತ್ತೇನೆ. ಇಲ್ಲವೆಂದರೆ ನಾನು ಕುಳಿತುಬಿಡುತ್ತೇನೆ. ಉಳಿದವರೆ ಬೇರೆ, ನಾನೇ ಬೇರೆ. ಇದು ನಿಮಗೆ ಗೊತ್ತಿರಲಿ.

ಶ್ರೀ ಕೆ.ಜೆ. ಜಾರ್ಜ್: ನೀವು ಏನು ಮಾಡಿದ್ದೀರಿ . . . .

ಶ್ರೀ ಎಂ. ಗೋವಿಂದ ಎಂ. ಕಾರಜೋಳ: ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀವು ಕೇವಲ ಭಾಷಣಗಳನ್ನು ಮಾಡಿಕೊಂಡೇ ಅರವತ್ತು ವರ್ಷ ಕಳೆದಿರಿ. ಅದಕ್ಕಾಗಿಯೇ ನೀವು ಅಲ್ಲಿಗೆ ಹೋದಿರಿ. ಇನ್ನೂ ನೂರಿಪ್ಪತ್ತು ವರ್ಷವಾದರೂ ಇಲ್ಲಿಯೇ ಇರಬೇಕಾಗಿತ್ತು ನೀವು. ಹರಿಜನ–ಗಿರಿಜನರ ಬಗ್ಗೆ, ನೇಕಾರರ ಬಗ್ಗೆ ನಿಮಗೆ ನಿಜವಾಗಿಯೂ ಕಳಕಳಿ ಇದ್ದಿದ್ದರೆ ನೀವು ಇಲ್ಲಿಯೇ ಇನ್ನೂ ಇರುತ್ತಿದ್ದಿರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್: 60 ವರ್ಷ ಭಾರತ ಸರ್ಕಾರ ಏನು ಮಾಡಿದೆ ಎಂದು ಎಲ್ಲರಿಗೂ ಗೊತ್ತಿದೆ. ಅದು ಇವರಿಗೆ ಗೊತ್ತಿಲ್ಲದಿರುವುದರಿಂದ 60 ವರ್ಷ ಏನು ಮಾಡಿದರು ಎಂದು ಕೇಳುತ್ತಾರಲ್ಲ. ಇವತ್ತು ಭಾರತ ಸರ್ಕಾರ...

ಶ್ರೀ ಗೋವಿಂದ ಎಂ. ಕಾರಜೋಳ: ನೋಡಿ. ನಾನು ಆ ಕಮ್ಯುನಿಟಿಯಿಂದ ಬಂದವನು. ನನಗೆ ಗೊತ್ತಿರುವಷ್ಟು ನಿಮಗೆ ಗೊತ್ತಿರುವುದಕ್ಕೆ ಸಾಧ್ಯವಿಲ್ಲ. ನೀವು ಕೇವಲ ಭಾಷಣ ಮಾಡಬಹುದು.

ಶ್ರೀ ಕೆ.ಜೆ. ಜಾರ್ಜ್: ಭಾರತವನ್ನು ಕಟ್ಟಿದವರು ನಾವು. ನೀವಲ್ಲ. ಭಾರತವನ್ನು ಕಟ್ಟಿದವರು ನಾವು.

(ಗೊಂದಲ)

ಶ್ರೀ ದೊಡ್ಡನಗೌಡ ಜಿ. ಪಾಟೀಲ್: ನೋಡಿ. ನೀವುಗಳು ಈ ರೀತಿ ಮಧ್ಯೆ ಮಧ್ಯೆ ತೊಂದರೆ ಕೊಡಬೇಡಿ. ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ನಿಮ್ಮ ಉತ್ತರ ಕೇಳುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಜೆ. ಜಾರ್ಜ್: ಮಾನ್ಯ ಅಧ್ಯಕ್ಷರೆ, 60 ವರ್ಷದಲ್ಲಿ ಏನೇನಾಗಿದೆ ಎಂಬ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ.

ಅಧ್ಯಕ್ಷರು: ಜಾರ್ಜ್‌ರವರೆ, ನೀವು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ನಾನು ಎಷ್ಟು ದಿವಸ ಬೇಕಾದರೂ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ. ಜಾರ್ಜ್‌ರವರೆ, ಇದು ನಿಮಗೆ ಗೊತ್ತಿರಲಿ. ನಾನು ಕೇವಲ ಭಾಷಣ ಮಾಡುವವನಲ್ಲ. ಆ ಕಮ್ಯುನಿಟಿಯಿಂದ ಬಂದವನು, ನೇಕಾರರ ಬಗ್ಗೆ ಅಪಾರವಾದಂಥ ಕಳಕಳಿ, ಕಾಳಜಿ ನನಗಿದೆ.

ಶ್ರೀ ಕೆ.ಜೆ. ಜಾರ್ಜ್: 60 ವರ್ಷದ್ದು ಗೊತ್ತಿದೆಯೆಂದು . . . .

ಶ್ರೀ ಗೋವಿಂದ ಎಂ. ಕಾರಜೋಳ: ನಾನು ಉತ್ತರ ಹೇಳಿಬಿಡಲೇನು. 2004 ರಿಂದ ಇಲ್ಲಿಯವರೆವಿಗೂ ಏನಾಗಿದೆಯೆಂದು ಉತ್ತರವನ್ನು ನಿಮಗೆ ಹೇಳಿಬಿಡಲೇನು? ಹೇಳಿಬಿಡಲೆ?

ಶ್ರೀ ಕೆ.ಜೆ. ಜಾರ್ಜ್: ಆಯಿತು. ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ: ಸುಮ್ಮನೆ ಇರಿ. ಕೆಡಿಸಿಕೊಳ್ಳಬೇಡಿ. ಮಾನ್ಯ ಅಧ್ಯಕ್ಷರೆ,

ಶ್ರೀ ಟಿ.ಬಿ. ಜಯಚಂದ್ರ: ನೀವು ಉತ್ತರವನ್ನು ಹೇಳಿ. ಅದನ್ನು ಬಿಟ್ಟು ಹೇಳಲೋ, ಬೇಡವೋ ಎಂದು ನಮ್ಮನ್ನು ಕೇಳಿಕೊಂಡು ಹೇಳುತ್ತೀರಲ್ಲಾ. ಇದು ಉತ್ತರವೆ? ಮೊದಲು ನೀವು ಉತ್ತರ ಹೇಳಿ. ಅದನ್ನು ಬಿಟ್ಟು ಉತ್ತರವನ್ನು ಹೇಳಲೆ ಎಂದು ನಮ್ಮನ್ನು ಕೇಳಬೇಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ,

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೆ, , , , ,

ಶ್ರೀ ಗೋವಿಂದ ಎಂ. ಕಾರಜೋಳ: ನೀವು ಕುಳಿತುಕೊಳ್ಳಿ. ನಾನು ಉತ್ತರ ಹೇಳುತ್ತೇನೆ. ನೀವು ದಯವಿಟ್ಟು ಕುಳಿತುಕೊಳ್ಳಿ. ನಾನು ಉತ್ತರವನ್ನು ಹೇಳುವುದಕ್ಕೆ ತಯಾರಿದ್ದೇನೆ. ನೀವೇನು ಕೇಳುತ್ತೀರೋ ಅದನ್ನು ನಾನು ಉತ್ತರವನ್ನು ಹೇಳಿದ ಮೇಲೆ ಕೇಳಿ. ಮೂರೂ ಜನರು ಕೇಳಿದರೂ ನಾನು ಅದಕ್ಕೆ ಉತ್ತರ ಹೇಳುವುದಕ್ಕೆ ತಯಾರಿದ್ದೇನೆ.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೆ, . .

ಅಧ್ಯಕ್ಷರು: ಪ್ಲೀಸ್ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಉತ್ತರ ಹೇಳುವುದಕ್ಕೇ ಬಿಡುವುದಿಲ್ಲವೆಂದರೆ ಹೇಗೆ ಹೇಳಿ ?

ಶ್ರೀ ಖಮರುಲ್ ಇಸ್ಲಾಂ: ಇವತ್ತು ಕರ್ನಾಟಕದ ಕನ್ನಡ ಕಾಂಟ್ರ್ಯಾಕ್ಟರ್‌ಗೆ. . . .

ಅಧ್ಯಕ್ಷರು: You are not allowing to answer him. I will close the matter.

ಶ್ರೀ ಖಮರುಲ್ ಇಸ್ಲಾಂ: ಕರ್ನಾಟಕದಲ್ಲಿ ಈ ಸರ್ಕಾರದಲ್ಲಿ ಎಲ್ಲ ಆಂಧ್ರ ಕಂಟ್ರ್ಯಾಕ್ಟರ್‌ಗಳೇ. . . .

ಅಧ್ಯಕ್ಷರು:– You are not allowing to answer him. I will close the matter.

(ಗೊಂದಲ)

ಶ್ರೀ ಲಕ್ಷ್ಮಣ ಸವದಿ: ಖಮರುಲ್‌ರವರೆ, ನೀವು ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂಥವರು. ನಿಯಮಾವಳಿಗಳು ಏನು ಹೇಳುತ್ತವೆ ಎನ್ನುವ ಪರಿಜ್ಞಾನವಾದರೂ ತಮಗೆ ಇರಬೇಕು. ಒಬ್ಬ ಮಂತ್ರಿ ಎದ್ದು ಉತ್ತರ ಹೇಳತಕ್ಕಂಥ ಸಂದರ್ಭದಲ್ಲಿ ಅದನ್ನೂ ಕೇಳುವುದಕ್ಕೂ ಸೌಜನ್ಯವಿಲ್ಲ.

ಶ್ರೀ ಗೋವಿಂದ ಎಂ ಕಾರಜೋಳ: ನೌಕರರ ಬಗ್ಗೆ ಅಪಾರವಾದಂತಹ ಕಳಕಳಿ ಮತ್ತು ಕಾಳಜಿಯನ್ನು ತೋರಿಸಿದ್ದಕ್ಕಾಗಿ ನಿಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇವತ್ತು ಸೀರೆ ಖರೀದಿಯ ಬಗ್ಗೆ ಹೇಳುವುದಾದರೆ ಈಗ ಕರ್ನಾಟಕ KTPP Act ಪ್ರಕಾರ ಟೆಂಡರ್ ಕರೆದು ಖರೀದಿ ಮಾಡಿರುವುದು. ಹೊರ ರಾಜ್ಯದವರು ಟೆಂಡರ್ ಹಾಕಬಾರದು, ನಮ್ಮ ರಾಜ್ಯದವರು ಅಷ್ಟೇ ಹಾಕಬೇಕು, ಕನ್ನಡ ಓದುವುದಕ್ಕೆ, ಬರೆಯುವುದಕ್ಕೆ ಬರುವವರು ಅಷ್ಟೇ ಹಾಕಬೇಕು ಎಂದು ನಿಯಮಾವಳಿ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ಅವಕಾಶವಿಲ್ಲ. ತಾವೂ ಕೂಡ ಮಂತ್ರಿಯಾಗಿದ್ದಿರಿ. ನೀವು ಇದರ ಬಗ್ಗೆ ಇಷ್ಟು ಸುಲಭವಾಗಿ ಮಾತನಾಡಬಾರದು, ತಮಗೆ ಗೊತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಿಯಮಾವಳಿಗಳ ಪ್ರಕಾರ ಖರೀದಿ ಮಾಡಿ ಮಾಡಿರುವುದು. ನಮ್ಮ ನೇಕಾರರಿಗೆ ಉದ್ಯೋಗ ಸಿಗಬೇಕು ಎನ್ನುವ ಕಾರಣಕ್ಕಾಗಿ ಬಡವರ ಮಕ್ಕಳಿಗೆ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಸಮವಸ್ತ್ರವನ್ನು ಕೊಡುವುದಕ್ಕೆ ಕೂಡ

ನಮ್ಮ ರಾಜ್ಯದಲ್ಲಿ ಇವರ ಮುಖಾಂತರವೇ ಖರೀದಿ ಮಾಡಿದ್ದೇವೆ. ಅದಕ್ಕೆ ಮೊದಲೇ plan ಮಾಡಿಕೊಂಡಿರುತ್ತೇವೆ, ಆಗ ಅವರಿಗೆ ಅಲ್ಲಿ ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಇದು ಏಕಾಏಕಿ ಬಂದಂತಹ ಪ್ರೋಗ್ರಾಮ್. ಅದಕ್ಕಾಗಿ ನಾನು ಹೇಳುತ್ತೇನೆ, ನೇಕಾರರಿಗೆ ಕೆಲಸ ಕೊಡುವ ದೃಷ್ಟಿಯಿಂದ ಮುಂದಿನ ವರ್ಷದಲ್ಲಿ ನಾವು ಖರೀದಿ ಮಾಡುವಂತಹ ಸಂದರ್ಭದಲ್ಲಿ ಅವರಿಗೆ ಆದ್ಯತೆ ಮೇಲೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ರೇಟ್ ಮತ್ತು ಸರ್ಕಾರದ ನಿಯಮಾವಳಿಗಳ ಪ್ರಕಾರ ಟೆಂಡರ್ ಕರೆದಮೇಲೆ, ಆ ಟೆಂಡರ್‌ನಲ್ಲಿ participate ಮಾಡಿ lowest rate ಹಾಕಿ ಯಾರು ಬರುತ್ತಾರೋ ಅವರಿಗೆ ನಾವು ಕೊಟ್ಟಿರುತ್ತೇವೆ. ಆ ರೀತಿ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಇದು ಸೀರೆ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ಭಾಗ.

ಎರಡನೆಯದಾಗಿ, ಡಚ್ ಸಾಲ ಮನ್ನಾ ಮಾಡಬೇಕೆಂದು ಕೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಆ ರೀತಿ ಸಾಲ ಮನ್ನಾ ಮಾಡಬೇಕೆಂದು ನಾನೂ ಕೂಡ ಮಾನ್ಯ ಉಪನಾಯಕರು ಈಗ ಏನು ಅಲ್ಲಿ ಕುಳಿತಿದ್ದಾರೆ, ಆ ಸ್ಥಾನದಲ್ಲಿ ಕುಳಿತು ಒತ್ತಾಯ ಮಾಡಿದ್ದೆನು. 1986–87ರಲ್ಲಿ ಪ್ರತಿ ಮನೆಯ ನೇಕಾರರಿಗೆ ಒಂದು ಸಣ್ಣ ಪ್ರಮಾಣದಲ್ಲಿ ಎಂದರೆ 7,000 ಚಿಲ್ಲರೆ ಸಾಲವನ್ನು work shed–cum–residenceಗೆ ಎಂದು ಕೊಟ್ಟಿದೆ. ಬಡವರಾದಂತಹ ನೇಕಾರರು ಆ ಸಣ್ಣ ಮೊತ್ತವನ್ನು ಕೂಡ ತುಂಬುವುದಕ್ಕೆ ಆಗಿಲ್ಲ, ಹಾಗಾಗಿ ಆ ಸಾಲ ಹಾಗೇ ಉಳಿದಿತ್ತು. ಅದಕ್ಕೆ ಬಡ್ಡಿ ಮನ್ನಾ ಮಾಡುವಂತಹ ಯೋಜನೆಯೊಳಗೆ ಅವಕಾಶವನ್ನು ಮಾಡಿಕೊಟ್ಟಿದ್ದೆವು. ಅದರ ಲಾಭವನ್ನು ಕೆಲವರು ಪಡೆದರು, ಆದರೆ ಕೆಲವರು ಪಡೆಯುವುದಕ್ಕೆ ಆಗಲಿಲ್ಲ. ಅದು ಒಟ್ಟು ನಮ್ಮ ರಾಜ್ಯದಲ್ಲಿ 4 ಕೋಟಿ ರೂಪಾಯಿ ಬಾಕಿ ಇದೆ. ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೇನೆ. ಈ ಅಧಿವೇಶನ ಮುಗಿದ ಮೇಲೆ ಒಂದು ಸಭೆ ಕರೆದು ಅದನ್ನು ಯಾವ ರೀತಿ ಮನ್ನಾ ಮಾಡಬೇಕು ಎನ್ನುವುದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ನಾವು

ರಾಜ್ಯದಲ್ಲಿ ಯಾವುದೇ ಸಾಲವನ್ನು ಮನ್ನಾ ಮಾಡುವಂತಹ ಸಂದರ್ಭದಲ್ಲಿ ಒಂದು ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ. ಈಗ ಬಡ್ಡಿ ಮನ್ನಾ ಮಾಡಬೇಕೆಂದಾಗ ಅದರ ಬಗ್ಗೆ ನಾವು ಆಲೋಚನೆ ಮಾಡಿದ್ದೆವು. ಈಗ ಅಸಲು 8,000 ರೂಪಾಯಿ ಕಟ್ಟುವುದಕ್ಕೆ ಆಗದಿರುವಂತಹ ಬಡವರೂ ಕೂಡ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾನೂ ಕೂಡ ವಿನಂತಿ ಮಾಡಿದ್ದೇನೆ ಮತ್ತು ಈಗಾಗಲೇ ಅದರ ಬಗ್ಗೆ ನಾವು ಕಾರ್ಯಪ್ರವೃತ್ತರಾಗಿದ್ದೇವೆ. ಅದರ ಬಗ್ಗೆ ನಂತರ ನಾವು ಸದನಕ್ಕೆ ತಿಳಿಸುತ್ತೇವೆ. ಮಾನ್ಯ ಜಯಚಂದ್ರರವರೆ, ನೀವು ಏಕೆ ಇಷ್ಟು ಅವಸರ ಮಾಡುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ: ನಿಮ್ಮ ಉತ್ತರವನ್ನು ಕರೆಕ್ಟ್ ಮಾಡುವುದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ನೀವು ಈ ಪ್ರಶ್ನೆಯಲ್ಲಿ ಇಲ್ಲದಿರುವಂತಹ ವಿಚಾರವನ್ನು ಕೇಳಿದ್ದೀರಿ. ನನ್ನ ಮಾಹಿತಿಗೆ ಅನುಗುಣವಾಗಿ ನನಗೆ ತಿಳಿದಿರುವ ಮಟ್ಟಿಗೆ ನಾನು ಉತ್ತರವನ್ನು ಹೇಳಿದ್ದೇನೆ, ಅದು ತಮಗೆ ಗೊತ್ತಿರಲಿ. ನೇಕಾರರು ಡಚ್‌ನಿಂದ ಅಷ್ಟೇ ಅಲ್ಲ, HDFCನಿಂದ ಕೂಡ ಕೆಲವರು ಸಾಲವನ್ನು ತೆಗೆದುಕೊಂಡಿರುವವರಿದ್ದಾರೆ. ಈ ಎಲ್ಲಾ ಸಾಲ ಸೇರಿದರೆ 4 ಕೋಟಿ ರೂಪಾಯಿ ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೇನೆ.

ಕೆಲವರು insurance ಬಗ್ಗೆ ಮಾತನಾಡಿದರು. Karnataka Handloom Development Corporation ನೇಕಾರರು ಏನಿದ್ದಾರೆ, ಅವರಿಗೆ insurance premium ಹಣ 80 ರೂಪಾಯಿ ಕಟ್ಟುವುದಕ್ಕೆ ಆಗದಿರುವುದರಿಂದ ಅದರಲ್ಲಿ ನಾವು 40 ರೂಪಾಯಿ ಕಟ್ಟುತ್ತೇವೆ, ಉಳಿದ 40 ರೂಪಾಯಿಯನ್ನು ಅವರು ಕಟ್ಟುತ್ತಾರೆ. ಈ insurance ಸೌಲಭ್ಯ power loom ನೇಕಾರರಿಗೆ ಇಲ್ಲ, ಅವರಿಗೂ ಕೂಡ ಸಿಗಬೇಕೆನ್ನುವುದು ಮಾನ್ಯ ಸದಸ್ಯರಾದ ಸಿದ್ದು ಹಾಗೂ ದೊಡ್ಡನಗೌಡರು, ಹುನಗುಂದ ಮತ್ತು ತೇರದಾಳು ಎಂಎಲ್‌ಎಗಳು ಈಗಾಗಲೇ ನನಗೆ ಪತ್ರವನ್ನು ಕೊಟ್ಟಿದ್ದಾರೆ.

ಅಲ್ಲದೆ ವಿರೋಧ ಪಕ್ಷದ ಕಡೆಯ ಸದಸ್ಯರು ಕೂಡ ನನಗೆ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಏನು ಹೇಳುವುದಕ್ಕೆ ಬಯಸುತ್ತೇನೆ ಎಂದರೆ insurance amount 80 ರೂಪಾಯಿ ಕಟ್ಟುವುದೇನಿದೆ ಅದನ್ನು powerloom ನೇಕಾರರಿರಲಿ, handloom ನೇಕಾರರಿರಲಿ ಅವರೆಲ್ಲರಿಗೂ ಕೂಡ 80 ರೂಪಾಯಿ ಪೂರ್ತಿಯಾಗಿ ಸರ್ಕಾರದಿಂದ ಕಟ್ಟಿಸುತ್ತೇವೆ ಮತ್ತು ಅದಕ್ಕೆ ಆದೇಶವನ್ನು ಮಾಡುತ್ತೇನೆ. ಒಟ್ಟು 80,000 ನೇಕಾರ ಕುಟುಂಬದವರು ಇದ್ದಾರೆ, ಅವರೆಲ್ಲರಿಗೂ ಕೂಡ ಮಾಡಿ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಆಗಬಹುದೇ? ಮತ್ತೆ ಏನಾದರೂ ಬಾಕಿಯಿದ್ದರೆ ಹೇಳಿ ಮಾಡುತ್ತೇನೆ. ನಾನು ಒಂದು ನಿಮಿಷ ಉತ್ತರ ಹೇಳುತ್ತೇನೆ, ನಾನು ಮುಗಿಸಿದ ನಂತರ ತಾವು ಹೇಳಬಹುದು.

ಇದಲ್ಲದೆ ನೇಕಾರರ ಮಕ್ಕಳಿಗೆ 12ನೇ ತರಗತಿಯವರೆಗೆ ಎಂದರೆ SSLC, PUC ಯವರೆಗೆ ಓದುವಂತಹ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ಕೊಡುತ್ತೇವೆ. ಅದನ್ನು ಈ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಎಂದರೆ ಏಪ್ರಿಲ್‌ನಿಂದ ಒಂದರಿಂದ ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತದೆ ಎಂದರೆ ನಾವು ಜೂನ್‌ನಿಂದ ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಗ್ರಾಜುಯೇಷನ್ ಆಗುವವರೆಗೆ ವಿದ್ಯಾರ್ಥಿ ವೇತನ ಕೊಡುವುದಕ್ಕೆ ಆದೇಶವನ್ನು ಮಾಡುತ್ತೇನೆ. ನೇಕಾರರ ಬಗ್ಗೆ ಮತ್ತೆ ಏನಾದರೂ ವಿಷಯವಿದ್ದರೆ ಹೇಳಿ. ಮಾನ್ಯ ಸಂಪಂಗಿಯವರೆ, ನಾನು ಉತ್ತರವನ್ನು ಕೊಡುತ್ತಿದ್ದೇನೆ, ನಂತರ ತಾವು ಏನಾದರೂ ಇದ್ದರೆ ಕೇಳಬಹುದು.

ನೇಕಾರರಿಗೆ 3% ಬಡ್ಡಿ ದರದಲ್ಲಿ ಕೆಲವು ಬ್ಯಾಂಕ್‌ಗಳಲ್ಲಿ ಸಾಲ ಕೊಡುತ್ತಿಲ್ಲವೆಂದು ಇವತ್ತು ಬಹಳ ಜನ ಆರೋಪವನ್ನು ಮಾಡಿದರು. ಬ್ಯಾಂಕ್‌ನವರು ನೇಕಾರರಿಗೆ ಸಾಲ ಕೊಡುವುದಿಲ್ಲ. ಅವರು ಏಕೆ ಕೊಡುವುದಿಲ್ಲವೆಂದರೆ ಇವರು ಬಡವರು ವಾಪಸ್ಸು ಅಸಲಿನ ಕಂತುಗಳನ್ನು ಕಟ್ಟುವುದಿಲ್ಲವೆಂದು ಕೊಡುವುದಿಲ್ಲ. ಅದಕ್ಕಾಗಿ ನಾವು ಏನು ಮಾಡಿದ್ದೇವೆಂದರೆ ಸರ್ಕಾರಿ ಸ್ವಾಮ್ಯದ Co-operative sectorನಲ್ಲಿರುವಂತಹ ಬ್ಯಾಂಕುಗಳಾಗಿರಬಹುದು, ಸಹಕಾರಿ ಸಂಘಗಳಾಗಿರಬಹುದು, ಅಲ್ಲಿ ಅವರಿಗೆ

ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆ. ಆದರೆ ಒಂದು ವಿಚಾರವೇನೆಂದರೆ ಸೊಸೈಟಿ ನಿಯಮಾವಳಿಗಳ ಪ್ರಕಾರ ಮತ್ತು ಬೈಲಾದಲ್ಲಿರುವ ಪ್ರಾವಿಜನ್ ಪ್ರಕಾರ ಅವರೂ ಕೂಡ ಸದಸ್ಯರಾಗ ಬೇಕಾಗುತ್ತದೆ. ಅದಕ್ಕಾಗಿ ಸದಸ್ಯತ್ವದ ಹಣವನ್ನು ಕಟ್ಟಬೇಕು. ಆ ಹಣವನ್ನು ಕಟ್ಟಿ ಯಾರ್ಯಾರು ಸದಸ್ಯರಾಗುತ್ತಾರೆ, ಅಂತಹವರಿಗೆ ಸಾಲ ಸೌಲಭ್ಯವನ್ನು ಕೊಡುವುದಕ್ಕೆ ನಮ್ಮ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವಂತಹ ಎಲ್ಲಾ ಸಂಸ್ಥೆಗಳಿಗೂ ನಾವು ಆದೇಶ ಮಾಡುತ್ತೇವೆ. ಅದಲ್ಲದೇ ಮಾನ್ಯ ಜಯಚಂದ್ರರವರಿಗೂ ನಾನು ವಿನಂತಿ ಮಾಡುತ್ತೇನೆ, ತಾವು ಪ್ರಧಾನ ಮಂತ್ರಿಗಳ ಮೇಲೆ ಪ್ರಭಾವ ಬೀರಿ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವಂತಹ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಕೂಡ ಸಾಲವನ್ನು ಕೊಡಿಸಬೇಕೆಂದು ವಿನಂತಿ ಮಾಡುತ್ತೇನೆ. ಏಕೆಂದರೆ ಅವರು ಕಾಂಗ್ರೆಸ್‌ನಲ್ಲಿ ಪ್ರಭಾವ ನಾಯಕರಿದ್ದಾರೆ. ನೀವೆಲ್ಲರೂ ಸೇರಿ ಒಂದು ನಿಯೋಗ ತೆಗೆದುಕೊಂಡು ಹೋದರೆ ನಿಮ್ಮ ನಿಯೋಗದ ಜೊತೆ ನಾನು ಬರುತ್ತೇನೆ. ನೀವು ಕೇಂದ್ರ ಸರ್ಕಾರದ ಬ್ಯಾಂಕುಗಳಲ್ಲಿ ಕೂಡ ಸಾಲ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಬಹಳಷ್ಟು ಜನ ಮಾತನಾಡಿದರು, ಅದಕ್ಕೆ ಒಂದೆರಡು ವಾಕ್ಯಗಳಲ್ಲಿ ಉತ್ತರವನ್ನು ಹೇಳುತ್ತೇನೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಮಹಾತ್ಮ ಗಾಂಧೀಜಿಯವರ ಕನಸು ಏನಿತ್ತು? ಈ ದೇಶದಲ್ಲಿರುವಂತಹ ಕುಶಲ ಕರ್ಮಿಗಳು, ಗ್ರಾಮೀಣ ಉದ್ಯೋಗವನ್ನು ನಂಬಿ ಬದುಕುವವರು, ಕುಲದ ಕಸುಬನ್ನು ಉದ್ಯೋಗ ಎಂದು ನಂಬಿ ಬದುಕುವವರು, ಅಂತಹವರಿಗೆ ಹೆಚ್ಚಿನ ಪ್ರಮಾಣದಲ್ಲಿ ಆದ್ಯತೆ ಸಿಗಬೇಕು, ಅವರ ಬದುಕು ಹಸನಾಗಬೇಕು, ಅವರು ಸ್ವದೇಶಿಯರಾಗಿ ಬದುಕಬೇಕು ಎನ್ನುವ ಕಾರಣಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಆದರೆ ದುರಾದೃಷ್ಟ ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಮಹಾತ್ಮ ಗಾಂಧೀಜಿಯವರ ಕನಸು ಏನಿತ್ತು, ಅವರ ಕಾರ್ಯಕ್ರಮಗಳು ಏನಿದ್ದವು, ಅವುಗಳನ್ನು ಜಾರಿಗೆ ತರಲಾರದ ಕಾರಣ ಎಲ್ಲಾ ನಿಮ್ಮ ವರ್ಗಗಳು, ಹಿಂದುಳಿದವರು ಇವತ್ತು ಕಾಂಗ್ರೆಸ್ ಅನ್ನು ಬಿಟ್ಟು

ಹೋಗುತ್ತಿದ್ದಾರೆ. ಮೊನ್ನೆ ಗುಜರಾತ್‌ನಲ್ಲಿ ನಡೆದಂತಹ ಚುನಾವಣೆಯಲ್ಲಿ ಮುಸಲ್ಮಾನರ ಪ್ರಭಾವ ಇರುವಂತಹ ಕ್ಷೇತ್ರದಲ್ಲಿ ಇವತ್ತು ಬಿಜೆಪಿ ಗೆದ್ದು ಬಂದಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಇದಕ್ಕೆ ಉತ್ತರವೇ ಇದು?

ಅಧ್ಯಕ್ಷರು: ಈಗ ಈ ಪ್ರಶ್ನೆಯನ್ನು ಮುಕ್ತಾಯ ಮಾಡಲಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು: ಇದು ಪ್ರಶ್ನೋತ್ತರ. ಇದು ಚರ್ಚೆಗೆ ಹೋಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದುವರೆಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ದಯಮಾಡಿ ಕೇಳಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನೀವು ಹ್ಯಾರಿಸ್‌ರವರು ಕೇಳಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಏನೆಂದರೆ ಅವರ ಕ್ಷೇತ್ರದಲ್ಲಿರುವಂತಹ ಕೈಮಗ್ಗದ ನೇಕಾರರು ಮೆಚ್ಚುವಂತಹ ರೀತಿಯಲ್ಲಿ ....

ಅಧ್ಯಕ್ಷರು: ನೀವು clarification ಕೇಳಿ ಎಂದರೆ, ನೀವು ಈ ತರಹ....ಇದು clarification ಆಗುವುದಿಲ್ಲ, ಉಪ ಪ್ರಶ್ನೆಯಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಅವರು ಏನು ಬೇಕಾದರೂ ಮಾತನಾಡಬಹುದು, ನಾವು ಮಾತನಾಡಬಾರದೇ?

ಅಧ್ಯಕ್ಷರು: ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: ಅವರು ಉತ್ತರ ಕೊಟ್ಟಿದ್ದಾರೆ. ಅವರು ಏನು ಹೇಳಿದರು ಎಂದರೆ ಕೈಮಗ್ಗ ಮತ್ತು Power Loom ನೇಕಾರರು ಇವತ್ತು ಅತ್ಯಂತ ಕಷ್ಟದಲ್ಲಿದ್ದಾರೆ. ಅದಕ್ಕೆ KTPP Act ಪ್ರಕಾರ ಹೊರ ರಾಜ್ಯದಿಂದ ಬಂದವರಿಗೆ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಲ್ಲ, ನಿಮ್ಮ KTPP Act ಪ್ರಕಾರ exemption ಕೊಡುವುದಕ್ಕೆ ಆಗುತ್ತಿರಲಿಲ್ಲವೇ?

ಅಧ್ಯಕ್ಷರು: ನಾನು ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

ಅಧ್ಯಕ್ಷರು: ನಾನು ಹ್ಯಾರಿಸ್‌ರವರನ್ನು ಕರೆದಿದ್ದೇನೆ.

ಶ್ರೀ ಖಮರುಲ್ ಇಸ್ಲಾಂ: ಒಂದು ನಿಮಿಷ, ನಾನು ಮಾತನಾಡುತ್ತೇನೆ. In Tamilnadu and Maharashtra, I will produce the order, they cannot purchase from any State and in Maharashtra 75% they have to purchase. Another thing... ನಾನು ಹೇಳುತ್ತೇನೆ...

ಅಧ್ಯಕ್ಷರು: No. You need not answer. ತಾವು ಕುಳಿತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡಬೇಕಾಗಿಲ್ಲ. ನಾನು ಹ್ಯಾರಿಸ್‌ರವರನ್ನು ಕರೆದಿದ್ದೇನೆ. It will not go on record, No. you are a senior member, if you are not able to hear...

ಶ್ರೀ ಎನ್.ಎ. ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಇಲ್ಲೇ ಇದ್ದಾರೆ. ಈ ವಿಷಯವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ, ಇಲ್ಲವೆಂದರೆ ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡಿ, ಏಕೆಂದರೆ ಇದರಲ್ಲಿ ಸುಮಾರು ವಿಷಯಗಳು ಇವೆ, ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಸಿದ್ದು ಸವದಿ: ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು, ಅರ್ಧ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆ.

ಬಾಗೇಪಲ್ಲಿ – ಗುಡಿಬಂಡೆ ತಾಲ್ಲೂಕುಗಳಲ್ಲಿ ಸಣ್ಣ ಕೈಗಾರಿಕೆಯ ಸಲುವಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನುಗಳು

150(521) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ ?

ಅ) ಬಾಗೇಪಲ್ಲಿ–ಗುಡಿಬಂಡೆ ತಾಲ್ಲೂಕುಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಇದುವರೆವಿಗೂ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ;